# ಕೃಷ್ಣಲೀಲೆಯ ಚಿತ್ರಶಾಲೆ – 'ಶ್ರೀಕೃಷ್ಣಕರ್ಣಾಮೃತಮ್'

ಡಾ. ವಾಗೀಶ್ವರೀ ಶಿವರಾಮ

ಕಾವ್ಯಗುಣದಿಂದಲೂ, ಭಕ್ತಿಪಾರಮ್ಯದಿಂದಲೂ ಅತ್ಯಂತ ಪ್ರಸಿದ್ಧವಾಗಿರುವ ಸ್ತುತಿರೂಪದ ಕೃತಿಯೊಂದನ್ನು ಇಲ್ಲಿ ಪರಿಚಯಿಸಲಾಗಿದೆ. ಸಾಧಕರಿಗೆ ಶ್ರೀಕೃಷ್ಣಪರಮಾತ್ಮನ ದಿವ್ಯ ಚಿತ್ರವನ್ನು ಕಟ್ಟಿಕೊಳ್ಳಲು ಅತ್ಯಂತ ಸಹಾಯಕವಾದ ಈ ಕೃತಿಯ ಸಾರವನ್ನು ಇಲ್ಲಿ ವಿಶದವಾಗಿ ಬಣ್ಣಿಸಲಾಗಿದೆ. ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿರುವ ಅವರು ಮೂವತ್ತಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.

ಶ್ರೀಕೃಷ್ಣಕರ್ಣಾಮೃತಂ, ಮುಕುಂದಮಾಲಾ (ಕುಲಶೇಖರ ಆಳ್ವಾರ್), ಗೀತಗೋವಿಂದ (ಜಯದೇವ) — ಇವು ಮೂರು ಭಾರತದ ಅದ್ಯಂತ ಪ್ರಸಿದ್ಧವಾಗಿರುವ ಮೂರು ವೈಷ್ಣವ ಭಕ್ತಿ ಕಾವ್ಯಗಳು. ಮುಕುಂದಮಾಲೆಯಲ್ಲಿ, ಭಕ್ತನು ಶ್ರೀಕೃಷ್ಣನ ಮುಂದೆ ನಿವೇದಿಸುವ ಶುದ್ಧ ಗಂಭೀರ ಚಿಂತನೆಗಳ ಮಾಲೆ ಇದೆ. ಗೀತಗೋವಿಂದ, ರಾಧಾ-ಕೃಷ್ಣರ (ಜೀವಾತ್ಮ-ಪರಮಾತ್ಮರ) ಪ್ರಣಯದ ಶೃಂಗಾರವನ್ನು ಸಂಕೋಚವಿಲ್ಲದೆ ವರ್ಣಿಸಿರುವ ಗೀತೆಗಳ ಗುಚ್ಛವಾಗಿದೆ. ಶ್ರೀಕೃಷ್ಣ-ಕರ್ಣಾಮೃತ ಕಾವ್ಯವು; ಗಂಭೀರ ಶೃಂಗಾರ, ದಾಸ್ಯ, ಭಕ್ತಿ – ಹೀಗೆ ನಾನಾ ರೀತಿಯ ಭಾವವನ್ನು ಅಭಿವ್ಯಕ್ತಗೊಳಿಸಿರುವ, ೩ ಆಶ್ವಾಸಗಳಲ್ಲಿ, ಸುಮಾರು ೩೩೦ ಶ್ಲೋಕಗಳಿರುವ ಭಕ್ತಕಾವ್ಯ. ಭಕ್ತನ ಉತ್ಕಟವಾದ ಸಾತ್ವಿಕ-ಭಾವಗಳನ್ನು ಎಳೆಎಳೆಯಾಗಿ ಪ್ರಕಟಿಸಿರುವ ಈ ಕಾವ್ಯ, ಉಳಿದ ಎರಡು ಗ್ರಂಥ ಗಳಿಗಿಂತಲೂ ದೀರ್ಘವಾಗಿದೆ.

'ಶ್ರೀಕೃಷ್ಣರ್ಣಾಮೃತಂ' ಕಾವ್ಯವನ್ನು ಬರೆದ ಕವಿ 'ಲೀಲಾಶುಕ' ಎಂದು ಪ್ರಸಿದ್ಧನಾಗಿದ್ದರೂ, ಆತನ ಮೊದಲ ಹೆಸರು 'ಬಿಲ್ವಮಂಗಳ' ಎಂದು ಅನೇಕ ವಿದ್ವಾಂಸರ ಅಭಿಪ್ರಾಯ. ಶುಕಮುನಿ, ಪರೀಕ್ಷಿತನಿಗೆ ಭಾಗವತರಸವನ್ನು ನೀಡಿದಂತೆ, ಋಷಿತುಲ್ಯನಾದ ಬಿಲ್ವಮಂಗಳ, ಕೃಷ್ಣಲೀಲಾಶುಕ – ಕೃಷ್ಣನ ಲೀಲೆಯನ್ನು ಸವಿಯುವ ಗಿಳಿ(ಶುಕ)ಯಾಗಿ, ಸಕಲರ ಕಿವಿಗಳಿಗೆ ಅಮೃತಪ್ರಾಯವಾದ ಕಾವ್ಯ ರಚಿಸಿದ್ದಾನೆ. ಸಂತ ತುಳಸೀದಾಸರ ಪರಿವರ್ತನೆಗೆ ಅವರ ಪತ್ನಿಯ ಮಾತುಗಳೇ ಕಾರಣವಾಗಿ 'ರಾಮಚರಿತ ಮಾನಸ'ದ (ಹಿಂದಿ ಭಾಷೆಯಲ್ಲಿದೆ) ಸೃಷ್ಟಿ ಆಗಿತ್ತು. ಅಂತೆಯೇ 'ಚಿಂತಾಮಣಿ' ಎಂಬ ನರ್ತಕಿಯಲ್ಲಿ ಮೋಹಗೊಂಡಿದ್ದ ಬಿಲ್ವಮಂಗಳನಿಗೆ, ಆಕೆ ಒಂದು ಬಾರಿ — ''ನನ್ನ ಮೇಲಿನ ಮೋಹದ ಸಾವಿರದ ಒಂದನೇ ಭಾಗವನ್ನು ಶ್ರೀ ಕೃಷ್ಣನಲ್ಲಿ ಇರಿಸಿದ್ದರೆ, ನಿನ್ನ ಜೀವನ ಸಾರ್ಥಕವಾಗಿ ಮೋಕ್ಷ ಸಿಗುತ್ತಿತ್ತು'' ಎಂದು ಹೇಳಿದ್ದಳು. ಇದರಿಂದ ಜ್ಞಾನೋದಯವಾಗಿ, ಬಿಲ್ವಮಂಗಳ ಭಕ್ತಿಭಾವ ಪರವಶನಾಗಿ, 'ಶ್ರೀಕೃಷ್ಣಕರ್ಣಾಮೃತಂ' ಕಾವ್ಯವನ್ನು ರಚಿಸಿದ ಎಂಬ ಐತಿಹ್ಯವೂ ಇದೆ. ಕವಿಯ ದೇಶ-ಕಾಲಗಳ ಬಗ್ಗೆ ಇದಮಿತ್ಥಂ ಎಂದು ತಿಳಿಯದಿದ್ದರೂ, ಈತ ೧೩ನೇ ಶತಮಾನಕ್ಕಿಂತಲೂ ಹಿಂದಿನವನೆಂದು, ಕೇರಳದವನು (ಅಥವಾ ಆಂಧ್ರದವನು) ಆಗಿರಬಹುದೆಂದು ಅಭಿಪ್ರಾಯಗಳಿವೆ. ಕಾವ್ಯದಲ್ಲೇ (೧ನೇ ಶ್ಲೋಕ) ಉಲ್ಲೇಖಗೊಂಡಿರುವಂತೆ, ಸೋಮಗಿರಿ ಎಂಬವರು ಆತನ ಜೀವನದ ಮಾರ್ಗದರ್ಶಕ ಗುರುಗಳು ಹಾಗೂ ಶಿಖಿಪಿಂಛಮೌಳಿ ವಿದ್ಯಾಗುರುಗಳೆಂದೂ ತಿಳಿದುಬರುತ್ತದೆ. ಶೈವಸಂಪ್ರದಾಯದ ಮನೆತನದವನಾಗಿದ್ದರೂ ಈತನ ಇಷ್ಟದೈವ ಶ್ರೀಕೃಷ್ಣ.

### ಕಾವ್ಯದ ಅಂತರಂಗದಲ್ಲಿ ಹುದುಗಿರುವ ಕವಿಯ ಭಾವಲಹರಿ

ಕವಿಯ ಅಂತರಂಗವನ್ನು ಅರ್ಥಮಾಡಿಕೊಳ್ಳಲು, ಕಾವ್ಯವನ್ನು ಓದುವವರು ಪ್ರಮುಖವಾದ ಮೂರು ದೃಷ್ಟಿಗಳಿಂದ ಓದಬೇಕು.

೧) ಇಲ್ಲಿರುವ ಶ್ಲೋಕಗಳೆಲ್ಲ ಶ್ರೀಕೃಷ್ಣನನ್ನೇ ತಮ್ಮ ಇಷ್ಟದೇವರೆಂದು ಪರಿಭಾವಿಸಿಕೊಂಡಿರುವ ಭಕ್ತರಿಗಾಗಿ ರಚಿತವಾಗಿವೆ.

೨) ಇಲ್ಲಿ ಚಿತ್ರಿತಗೊಂಡಿರುವ ಶ್ರೀಕೃಷ್ಣ, ಅಧ್ಯಾತ್ಮ ತತ್ತ್ವವನ್ನು ಸುಲಭವಾಗಿ ತಿಳಿಸಲು ಧರ್ಮ ನಿರ್ಮಿಸಿಕೊಂಡಿರುವ ಒಂದು ಸಂಕೇತ, ಕಲ್ಪನೆಯ ಒಂದು ಮೂರ್ತಿ.

೩) ಸಾಧಕ ಭಕ್ತನು ಏಕಾಂತದಲ್ಲಿ ತನ್ನ ಇಷ್ಟದೇವತಾ ಮೂರ್ತಿಯನ್ನು ಧ್ಯಾನಿಸುವಂತೆ, ಇಲ್ಲಿನ ಶ್ಲೋಕಗಳನ್ನು ಮನನ ಮಾಡಿಕೊಳ್ಳಬೇಕು. ತನ್ನಂತೆ ಸಮಾನಶೀಲನಾದ ಇನ್ನೊಬ್ಬನೊಡನೆ, ಕಾವ್ಯದ ಭಾವಗಳನ್ನು ಹಂಚಿಕೊಳ್ಳಬಹುದು.

ಈ ಕಾವ್ಯದ ಶ್ಲೋಕಗಳೆಲ್ಲ ಸ್ವಯಂಪೂರ್ಣವಾಗಿರುವ ಧ್ಯಾನಶ್ಲೋಕಗಳು. ಅಂದರೆ ಒಂದು ಶ್ಲೋಕದ ಅರ್ಥವನ್ನು ತಿಳಿಯಲು, ಹಿಂದಿನ ಮುಂದಿನ ಶ್ಲೋಕಗಳ ವಿಷಯ ತಿಳಿಯಬೇಕೆಂದಿಲ್ಲ. ಕವಿ ಮತ್ತೆ ಮತ್ತೆ ಶ್ರೀಕೃಷ್ಣನ ಲೀಲೆಯನ್ನು ಸುಂದರ ರೂಪವನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತ ಹೊಸ ವಿವರಗಳೊಡನೆ ಕೃಷ್ಣಮೂರ್ತಿಯನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತಾನೆ. ಇಲ್ಲಿ ಬರುವ ಕೃಷ್ಣನ ಮೂರ್ತಿ ಬೇರೆ ಬೇರೆ ವಯಸ್ಸಿನವು, ಭಿನ್ನ ಭಿನ್ನ ಸಂದರ್ಭದವು. ಅಂಬೆಗಾಲಿಡುವ ಕೃಷ್ಣ, ಬೆಣ್ಣೆಯನ್ನು ಹಿಡಿದಿರುವ ಕೃಷ್ಣ, ಹಾಲು ಬೇಡುವ ಕೃಷ್ಣ, ಬೆಣ್ಣೆ-ಮೊಸರು ಕದಿಯುವ ಕೃಷ್ಣ, ದನಗಳ ಮಂದೆಯಲ್ಲಿ ನುಗ್ಗಿ ತಾಯಿ ಯಶೋದೆಯ ಕೈಗೆ ಸಿಗದೆ ಓಡುವ ಕೃಷ್ಣ, ಮಣ್ಣು ತಿಂದನೆಂದು ದೂರು ಬಂದಾಗ ತಿನ್ನಲಿಲ್ಲವೆಂದು ಹೇಳುತ್ತ ತಾಯಿಗೆ ಬಾಯಿ ತೆರೆದು ತೋರಿದ ಕೃಷ್ಣ, ಗೊಲ್ಲ ಚೆಲುವೆಯರೊಡನೆ

ಆಟವಾಡುವ ಕೃಷ್ಣ, ಗೋವರ್ಧನ-ಉದ್ಧಾರಿ ಕೃಷ್ಣ, ಕಂಸ ಸಂಹಾರಿ ಕೃಷ್ಣ — ಹೀಗೆ ಕಾವ್ಯದ ೩೦೦ ಶ್ಲೋಕಗಳಲ್ಲಿ ಕೃಷ್ಣನ ೩೦೦ ಚಿತ್ರಗಳು ದೊರೆಯುತ್ತವೆ. ಶ್ರೀಕೃಷ್ಣಕರ್ಣಾಮೃತ, ಕೃಷ್ಣ ಲೀಲೆಗಳ ಕುರಿತ ಕಥೆಗಳ ಮಾಲೆ, ಚಿತ್ರಶಾಲೆ.

ಕಾವ್ಯ ಸಹಜವಾಗಿ, ಸರಳವಾಗಿ ದ್ರಾಕ್ಷಾಪಾಕದಂತೆ ಇದೆ. ಕವಿಯ ಕಥನ - ರಚನಾಚಾತುರ್ಯಗಳು ಸಹೃದಯನ, ಹೃದಯವನ್ನು ತಟ್ಟುತ್ತವೆ. ಇದರಲ್ಲಿ ಪ್ರಾಸ-ಅನುಪ್ರಾಸಗಳ ಸೊಗಸು, ಬಹು ವಿಧದ ಛಂದಸ್ಸು, ಸ್ವರಗಳ ವಿನ್ಯಾಸ, ಅಲಂ ಕಾರ, ವ್ಯಂಗ್ಯ, ಶೃಂಗಾರ, ವೀರ, ಕರುಣ, ಹಾಸ್ಯ, ಅದ್ಭುತ ರಸ ಗಳು - ಹೀಗೆ ಕಾವ್ಯದ ಎಲ್ಲಾ ಸಾಹಿತ್ಯ-ತತ್ತ್ವಗಳಿಂದ ಗರ್ಭಿತ ವಾಗಿದ್ದು, ಸರಳವಾದ ಅರ್ಥಗಳನ್ನು ಹೊಂದಿರುವುದರಿಂದ ಭಕ್ತನಿಗೆ, ಭಾವೋತ್ಕಟತೆಯನ್ನು ಹೊಂದಿ ಸಮಾಧಿಯ ಸ್ಥಿತಿಗೆ ಹೋಗಲು ಪೂರಕವೂ, ಪ್ರೇರಕವೂ ಆಗಿದೆ. ಭಕ್ತಿರಸ ಪುಷ್ಟವಾದ ಕಾವ್ಯಕ್ಕೆ ಅನೇಕ ವಿದ್ವಾಂಸರು ಭಾಷ್ಯಗಳನ್ನೂ (ವಿವರಣಾ ಗ್ರಂಥ ಗಳು) ಬರೆದು, ಇದರ ಲೋಕಪ್ರಿಯತೆಯನ್ನು ಇಮ್ಮಡಿಗೊಳಿಸಿ ದ್ದಾರೆ. ಕವಿಯು ಕಾವ್ಯವನ್ನು ರಚಿಸಿ, ತನ್ನ ಇಷ್ಟದೇವರ ಮೂರ್ತಿ ಯನ್ನು ತನ್ನ ಚಿತ್ತಭಿತ್ತಿಯಲ್ಲಿ ಭದ್ರವಾಗಿ ಮುದ್ರಿಸಿಕೊಂಡಿದ್ದಾನೆ. ಹೀಗೆ ಧ್ಯಾನದ ಸಿದ್ಧಿಯಿಂದ, ದೈವಸಾಕ್ಷಾತ್ಕಾರ ಪಡೆದು, ಶರೀರ ಬಂಧದಿಂದ ಮುಕ್ತಿ ಪಡೆದಿದ್ದಾನೆ.

### ಕವಿಚಿತ್ರಿತ ಚಿತ್ರಶಾಲೆಯ ವಿಹಂಗಮ ನೋಟ

ಮಾರ್ಕಂಡೇಯ ಮುನಿಗಳು ಪರಮಾತ್ಮನ ಅನುಗ್ರಹ ದಿಂದ, ಪ್ರಳಯಕಾಲದಲ್ಲಿ, ಆಲದ ಎಲೆಯ ಮೇಲೆ ಮಲಗಿದ್ದ ಬಾಲಕೃಷ್ಣನನ್ನು ಕಂಡ ಬಗೆಯನ್ನು ಕವಿವರ್ಣಿಸಿರುವ ಬಗೆ ಹೀಗಿದೆ: *( ಆಶ್ವಾಸ ೨, ಶ್ಲೋಕ ೫೮)*



**ಕರಾರವಿಂದೇನ ಪದಾರವಿಂದಂ**
**ಮುಖಾರವಿಂದೇ ವಿನಿವೇಶಯಂತಮ್ ।**
**ವಟಸ್ಯ ಪತ್ರಸ್ಯ ಪುಟೇ ಶಯಾನಂ**
**ಬಾಲಂ ಮುಕುಂದಂ ಮನಸಾ ಸ್ಮರಾಮಿ ॥**

'ಕೈ ಎಂಬ ಕಮಲದಿಂದ, ಪಾದವೆಂಬ ಕಮಲವನ್ನು, ಬಾಯಿ ಎಂಬ ಕಮಲದಲ್ಲಿ ಇರಿಸುತ್ತಲಿರುವ, ಆಲದ ಎಲೆಯ ಮೇಲೆ ಮಲಗಿರುವ, ಬಾಲಕೃಷ್ಣನನ್ನು ಮನಸ್ಸಿನಿಂದ ಸ್ಮರಿಸಿ ಕೊಳ್ಳುತ್ತೇನೆ.'

ಕವಿಯ ಈ ರಚನೆ, ಯಶೋದೆಯಂತೆ ವಾತ್ಸಲ್ಯದ ಭಕ್ತಿ ಭಾವದಿಂದಲೂ ಪರಮಾತ್ಮನನ್ನು ಕಾಣಬಹುದು, ಭಕ್ತಿಯ ಉತ್ಕಟತೆ ತಲುಪಲು ಮಗುವಿನಂತೆ ನಿರ್ಮಲ ಹೃದಯದವ ರಾಗಬೇಕು, ಚಿತ್ತವೃತ್ತಿ ನಿರೋಧವೇ ಭಗವಂತನ ಸಾಕ್ಷಾತ್ಕಾರಕ್ಕೆ ಪ್ರಥಮ ಸೋಪಾನ — ಎಂಬುದನ್ನು ತಿಳಿಸುತ್ತದೆ.

ಅನೇಕ ಕೃಷ್ಣಭಕ್ತರ ಬಾಯಿಯಲ್ಲಿ ನಲಿದಾಡುವ, ಶ್ರೀಕೃಷ್ಣನ ಧ್ಯಾನಕ್ಕೆ ಯೋಗ್ಯವಾದ, ಪ್ರೌಢ ಕೃಷ್ಣನನ್ನು ಕಣ್ಣ ಮುಂದೆ ತಂದು ನಿಲ್ಲಿಸುವ ಕವಿಯ ಇನ್ನೊಂದು ರಚನೆಯನ್ನು ನೋಡೋಣ:

**ಕಸ್ತೂರೀ ತಿಲಕಂ ಲಲಾಟಫಲಕೇ ವಕ್ಷಃಸ್ಥಲೇ ಕೌಸ್ತುಭಮ್ ।**
**ನಾಸಾಗ್ರೇ ನವಮೌಕ್ತಿಕಂ ಕರತಲೇ ವೇಣುಂ ಕರೇ ಕಂಕಣಂ ।**
**ಸರ್ವಾಂಗೇ ಹರಿಚಂದನಂ ಚ ಕಲಯನ್ ಕಂಠೇ ಚ ಮುಕ್ತಾವಲಿಂ**
**ಗೋಪಸ್ತ್ರೀ ಪರಿವೇಷ್ಟಿತೋ ವಿಜಯತೇ ಗೋಪಾಲಚೂಡಾಮಣಿಃ ॥**

*(೨-೧೦೯)*

'ಹಣೆಯಲ್ಲಿ ಕಸ್ತೂರೀ ತಿಲಕ, ಎದೆಯಲ್ಲಿ ಕೌಸ್ತುಭ ಮಣಿ, ಮೂಗಿನ ತುದಿಯಲ್ಲಿ ಹೊಸ ಮುತ್ತು, ಕೈಯಲ್ಲಿ ಕೊಳಲು, ಮುಂಗೈಯಲ್ಲಿ ಕಂಕಣ, ಎಲ್ಲಾ ಅಂಗಾಂಗಗಳಲ್ಲಿ ಹರಿಚಂದನ, ಕಂಠದಲ್ಲಿ ಮುತ್ತಿನ ಸರ — ಇವುಗಳನ್ನೆಲ್ಲ ಧರಿಸಿಕೊಂಡು, ಗೋಪಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿರುವ ಗೋಪಾಲಕರ ನಾಯಕನಾದ ಶ್ರೀಕೃಷ್ಣನು ಸರ್ವೋತ್ಕೃಷ್ಟನಾಗಿದ್ದಾನೆ.'

ಕೃಷ್ಣಭಾವದಲ್ಲಿ ಪರಿಪ್ಲುತನಾಗಿ, ಆರ್ತನಾಗಿ, ಕೃಷ್ಣನ ಕಾರುಣ್ಯ ಗುಣವನ್ನೇ ಸ್ಮರಿಸುತ್ತಾ, ಅಂತರಂಗದಿಂದ ಧುಮ್ಮಿಕ್ಕಿದ ಕೃಷ್ಣನ ನಾಮಾವಳಿಗಳ ಧಾರೆಯ ಓಘ ಹೀಗಿದೆ: *(೨-೧೦೮)*

**ಹೇ ಗೋಪಾಲಕ ಹೇ ಕೃಪಾಜಲನಿಧೇ ಹೇ ಸಿಂಧುಕನ್ಯಾಪತೇ**
**ಹೇ ಕಂಸಾಂತಕ ಹೇ ಗಜೇಂದ್ರ ಕರುಣಾಪಾರೀಣ ಹೇ ಮಾಧವ ।**
**ಹೇ ರಾಮಾನುಜ ಹೇ ಜಗತ್ರಯಗುರೋ ಹೇ ಪುಂಡರೀಕಾಕ್ಷ ಮಾಂ**
**ಹೇ ಗೋಪೀ-ಜನನಾಥ ಪಾಲಯ ಪರಂ ಜಾನಾಮಿ ನ ತ್ವಾಂ ವಿನಾ ॥**

'ಓ ಗೋವುಗಳ ಪಾಲಕನೇ! ಓ ಕರುಣಾಸಾಗರನೇ! ಓ ಲಕ್ಷ್ಮೀಪತಿಯೇ! ಓ ಕಂಸ ಸಂಹಾರಿಯೇ! ಗಜೇಂದ್ರನ ಮೇಲೆ ಅತಿಶಯವಾದ ಕರುಣೆಯನ್ನು ತೋರಿದವನೇ! ಮಾಧವನೇ! ಬಲರಾಮನ ಸಹೋದರನೇ, ಮೂರು ಲೋಕದ ಗುರುವೇ!

ಕಮಲದಂತೆ ಕಣ್ಣುಳ್ಳವನೇ! ಗೋಪಸ್ತ್ರೀಯರ ಕಣ್ಮಣಿಯೇ! ನನ್ನನ್ನು ರಕ್ಷಿಸು. ನಿನ್ನನ್ನು ಬಿಟ್ಟು ಬೇರೆ ಏನನ್ನೂ ನಾನು ತಿಳಿದಿಲ್ಲ.'

ಈ ಶ್ಲೋಕದಲ್ಲಿ ಲೋಕದಲ್ಲಿ ಕವಿಯ ಏಕದೇವಾತಾನಿಷ್ಠ ಹಾಗೂ ತನ್ಮಯತೆ ಪ್ರಕಟಗೊಂಡಿದ್ದು, ಸಾಧಕನಿಗೆ ಅನುಕರಣ ಯೋಗ್ಯವಾಗಿದೆ.

ಸಂಭಾಷಣ ಶೈಲಿಯಲ್ಲಿರುವ, ರೋಚಕವಾದ, ಬಾಲ ಲೀಲೆಗೆ ಸಂಬಂಧಿಸಿದ ಎರಡು ಪ್ರಸಂಗಗಳ ಚಿತ್ರಣದ ರಸಾಸ್ವಾದನ ಮಾಡೋಣ:



ತಾಯಿ ಯಶೋದೆ ಮುದ್ದು ಕೃಷ್ಣನಿಗೆ ಕಥೆ ಹೇಳುತ್ತಾ, ಮಲಗಿಸುವ ಸನ್ನಿವೇಶದ ಚಿತ್ರಣ ಇಲ್ಲಿದೆ; ಯಶೋದೆ ರಾಮನ ಕಥೆ ಹೇಳಿದಾಗ, ಕೃಷ್ಣ ಹೂಂಗುಟ್ಟುತ್ತ ಕಥೆ ಕೇಳುವುದನ್ನು ಕವಿ ಹೀಗೆ ವರ್ಣಿಸಿದ್ದಾನೆ: *(೨-೭೨)*

**ರಾಮೋ ನಾಮ ಬಭೂವ ಹುಂ, ತದಬಲಾ ಸೀತೇತಿ ಹುಂ ತೌ ಪಿತುಃ**
**ವಾಚಾ ಪಂಚವಟೀವನೇ ವಿಹರತಾಸ್ತಾಮಾಹರದ್ರಾವಣಃ ।**
**ನಿದ್ರಾರ್ಥಂ ಜನನೀ ಕಥಾಮಿತಿ ಹರೇರ್ಹುಂಕಾರತಃ ಶೃಣ್ವತಃ**
**ಸೌಮಿತ್ರೇ ಕ್ವ ಧನುರ್ಧನುರ್ಧನುರಿತಿ ವ್ಯಗ್ರಾ ಗಿರಃ ಪಾತು ನಃ ॥**

''ರಾಮ ಎಂಬಾತ ಇದ್ದನು. ''ಹುಂ''. ''ಸೀತೆ ಎಂಬುವವಳು ಅವನ ಹೆಂಡತಿ. ''ಹುಂ.'' ತಂದೆಯ ಮಾತಿನಂತೆ ಅವರು ಪಂಚವಟೀ ವನದಲ್ಲಿ ವಿಹರಿಸುತ್ತಿದ್ದರು. ಆಕೆಯನ್ನು ರಾವಣನು ಅಪಹರಿಸಿದನು.'' ನಿದ್ರೆ ಮಾಡಿಸಲು ತಾಯಿ ಹೇಳುತ್ತಿದ್ದ ಕಥೆಯನ್ನು ಹೀಗೆ 'ಹುಂ ಹುಂ' ಎಂದು ಕೇಳುತ್ತಿದ್ದ ಹರಿಯ ''ಎಲೈ ಲಕ್ಷ್ಮಣ! ಬಿಲ್ಲೆಲ್ಲಿ? ಬಿಲ್ಲೆಲ್ಲಿ!'' ಎಂಬ ವ್ಯಗ್ರವಾದ ನುಡಿಗಳು ನಮ್ಮನ್ನು ರಕ್ಷಿಸಲಿ.''

ಏಳನೆಯ ಅವತಾರವಾಗಿ ಭಗವಂತ ರಾಮನಾದರೆ, ಎಂಟನೆಯ ಅವತಾರವೇ ಶ್ರೀಕೃಷ್ಣ. ಕೃಷ್ಣನಾದಾಗ; ರಾಮನ ಕಥೆಯನ್ನು ಕೇಳಿ, ಆ ಭಾವಕ್ಕೆ ಹೋಗಿ; ತನ್ಮಯನಾಗಿ, ಸೀತಾಪಹರಣದ ವಿಷಯ ಕೇಳಿ, ''ಲಕ್ಷ್ಮಣ! ಬಿಲ್ಲು ಕೊಡು'' ಎಂದು ಕೇಳಿದ. ರಾಮ-ಕೃಷ್ಣರ ಅವತಾರ ಸ್ವರೂಪರಾದ ಶ್ರೀರಾಮಕೃಷ್ಣ ಪರಮಹಂಸರ ಜೀವನದಲ್ಲೂ, ಅನೇಕ ಸಂದರ್ಭಗಳಲ್ಲಿ ಭಾವತನ್ಮಯತೆಗೆ ಒಳಗಾಗುತ್ತಿದ್ದ ಸನ್ನಿವೇಶಗಳನ್ನು ಸ್ಮರಿಸಿಕೊಳ್ಳಬೇಕು. ಸಿಂಹವನ್ನು ನೋಡಿದಾಗ, ದೇವಿಯ ಸ್ಮರಣೆಯಾಗುತ್ತಿತ್ತು. ಶಿವನ ವೇಷ ಧರಿಸಿದಾಗ, ಶಿವನ ಸ್ವರೂಪದಲ್ಲೀ ತನ್ಮಯರಾಗುತ್ತಿದ್ದರು. ಭಾವತನ್ಮಯತೆಯೇ ಆಧ್ಯಾತ್ಮಿಕ ಸಾಧಕನ ಜೀವಾಳವೆಂಬ, ಜಾಗೃತಿಯ ಮಾತು - ಕವಿಯ ಈ ಶ್ಲೋಕದಲ್ಲಿ ಧ್ವನಿಸಿದೆ.

ಕೃಷ್ಣ ; ಗೊಲ್ಲ ಬಾಲಕರೊಡನೆ ಹಾಲು, ಮೊಸರು, ಬೆಣ್ಣೆಗಳನ್ನು ಕದಿಯುವ ಲೀಲಾಪ್ರಸಂಗದ ಒಂದು ಸನ್ನಿವೇಶದಲ್ಲಿ, ಕೃಷ್ಣನಿಗೂ-ಹಿರಿಯ ಗೊಲ್ಲತಿಗೂ ನಡೆದ ಸಂಭಾಷಣೆ, ಮುಗ್ಧತೆಯ ಉತ್ತರದಿಂದ ಸಹೃದಯರ ಅಂತರಂಗದಲ್ಲಿ ಆನಂದವನ್ನುಂಟುಮಾಡುವ ಮತ್ತೊಂದು ವರ್ಣನೆ ಹೀಗಿದೆ: *(೨-೮೨)*

**ಕಸ್ತ್ವಂ ಬಾಲ ಬಲಾನುಜಃ ಕಿಮಿಹ ತೇ ಮನ್ಮಂದಿರಾಶಂಕಯಾ**
**ಯುಕ್ತಂ ತನ್ನವನೀತಪಾತ್ರವಿವರೇ ಹಸ್ತಂ ಕಿಮರ್ಥಂ ನ್ಯಸೇಃ।**
**ಮಾತಃ-ಕಂಚನ ವತ್ಸಕಂ ಮೃಗಯಿತುಂ ಮಾ ಗಾ ವಿಷಾದಂ ಕ್ಷಣಾತ್**
**ಇತ್ಯೇವಂ ವರವಲ್ಲವೀ ಪ್ರತಿವಚಃ ಕೃಷ್ಣಸ್ಯ ಪುಷ್ಣಾತು ನಃ ॥**

'' 'ಯಾರೋ ನೀನು ಹುಡುಗ?' 'ಬಲರಾಮನ ತಮ್ಮ'. 'ಇಲ್ಲಿ ನಿನಗೇನು ಕೆಲಸ?' 'ನಮ್ಮ ಮನೆ ಎಂದು ತಿಳಿದೆ'. 'ಒಳ್ಳೆಯದು, ಆದರೆ ಬೆಣ್ಣೆಯ ಗಡಿಗೆಯ ಬಾಯಲ್ಲಿ ಏಕೆ ಕೈ ಇರಿಸಿದ್ದೀಯೆ?' 'ತಾಯಿ! ಬೇರೇನೂ ಇಲ್ಲ, ಒಂದು ಕರುವನ್ನು ಹುಡುಕುವುದಕ್ಕಾಗಿ. ಒಂದು ಕ್ಷಣವೂ ಬೇಸರಿಸದೇ ತಡೆದು ಬಿಡು'- ಹೀಗೆ ಹಿರಿಯ ಗೊಲ್ಲತಿಗೆ ಮುಗ್ಧ ಕೃಷ್ಣನು ಹೇಳಿದ ಉತ್ತರ ನಮ್ಮನ್ನು ಪೋಷಿಸಲಿ.''

ಶ್ರೀ ಕೃಷ್ಣನ ಸರ್ವವ್ಯಾಪಕತತ್ವವನ್ನು ತಿಳಿಸುವ ಒಂದು ಚಿತ್ರ ಹೃದಯಂಗಮವಾಗಿದೆ:

**ಅಂತರ್ಗೃಹೇ ಕೃಷ್ಣಮವೇಕ್ಷ್ಯ ಚೋರಂ**
**ಬಧ್ವಾ ಕವಾಟಂ ಜನನೀ ಗತೈಕಾ ।**
**ಉಲೂಖಲೇ ದಾಮ ನಿಬದ್ಧಮೇನಂ**
**ತತ್ರಾಪಿ ದೃಷ್ಟ್ವಾ ಸ್ತಿಮಿತಾ ಬಭೂವ ॥**

''ಒಬ್ಬಳು ಗೊಲ್ಲತಿ, ತನ್ನ ಮನೆಯೊಳಗೆ ಕದಿಯಲು ಬಂದಿದ್ದ ಕೃಷ್ಣನನ್ನು ಕಂಡು, ಬಾಗಿಲು ಹಾಕಿಕೊಂಡು ತಾಯಿ ಯಶೋದೆಯ ಬಳಿಗೆ ಹೋದಳು. ಯಶೋದೆಯ ಮನೆಯಲ್ಲಿ ಒರಳುಕಲ್ಲಿಗೆ ಹಗ್ಗದಿಂದ ಕಟ್ಟಿಹಾಕಿರುವ ಬಾಲಕೃಷ್ಣನನ್ನು ಕಂಡು ಸ್ತಂಭೀಭೂತಳಾದಳು.''

**ಶ್ರೀಕೃಷ್ಣಸ್ತು ಭಗವಾನ್ ಸ್ವಯಂ** – ''ಶ್ರೀಕೃಷ್ಣನು ಸಾಕ್ಷಾತ್ ಭಗವಂತನೇ ಆಗಿದ್ದಾನೆ'' ಎಂದು ಭಾಗವತ ಸಾರುತ್ತದೆ.

**''ಸತ್ಯಂ ಜ್ಞಾನಂ ಅನಂತಂ ಬ್ರಹ್ಮ''** – ಸತ್ಯ, ಜ್ಞಾನ ಸ್ವರೂಪ ನಾದ ಪರಮಾತ್ಮನು(ಪರಬ್ರಹ್ಮ) ಅನಂತನಾಗಿದ್ದಾನೆ. ಅವನಿಲ್ಲದ ತಾಣವೇ ಇಲ್ಲ'', ಎಂಬ ಉಪನಿಷತ್ತಿನ ವಾಣಿ ಈ ವರ್ಣನೆ ಯಲ್ಲಿ ಸಾಕಾರಗೊಂಡಿದ್ದು, ಒಬ್ಬನೇ ಆದ ಕೃಷ್ಣ, ಗೋಪಿಕೆಯ ಮನೆಯಲ್ಲೂ, ಯಶೋದೆಯ ಮನೆಯಲ್ಲೂ ಏಕಕಾಲದಲ್ಲಿರು ವುದು ವಿಸ್ಮಯವನ್ನುಂಟುಮಾಡುತ್ತದೆ.

ಪರಬ್ರಹ್ಮವೇ ರಾಮನಾಗಿ (೭ನೆ ಅವತಾರ) ಕೃಷ್ಣನಾಗಿ (೮ನೇ ಅವತಾರ) ಅವತರಿಸಿರುವುದನ್ನು ತಿಳಿದಿದ್ದರೂ, ಕೃಷ್ಣನ ರೂಪದಲ್ಲೇ ಅತಿಶಯವಾದ ಪ್ರೀತಿ, ನಿಷ್ಠೆಯುಳ್ಳ ಭಕ್ತನೊಬ್ಬ ರಾಮನ ಮಂದಿರಕ್ಕೆ ಬಂದಾಗ, ಅವನ ಅಂತರಂಗದ ಪ್ರಾರ್ಥನೆ ಯನ್ನು ಕವಿ ಹೀಗೆ ಚಿತ್ರಿಸಿದ್ದಾನೆ: *(೩–೯೪)*

**ವಿಹಾಯ ಕೋದಂಡಶರೌ ಮುಹೂರ್ತಂ**
**ಗೃಹಾಣ ಪಾಣೌ ಮಣಿಚಾರುವೇಣುಮ್ ।**
**ಮಯೂರಬರ್ಹಂ ಚ ನಿಜೋತ್ತಮಾಂಗೇ**
**ಸೀತಾಪತೇ ತ್ವಾಂ ಪ್ರಣಮಾಮಿ ಪಶ್ಚಾತ್ ॥**

''ಹೇ ಸೀತಾಪತಿ ಶ್ರೀರಾಮ! ಕ್ಷಣಕಾಲ ನಿನ್ನ ಕೈಯಲ್ಲಿರುವ ಬಿಲ್ಲು ಬಾಣಗಳನ್ನು ಬಿಟ್ಟು, ಮಣಿಗಳಿಂದ ಶೋಭಿಸುವ ಕೊಳಲನ್ನು ಹಿಡಿದುಕೊ. ನಿನ್ನ ತಲೆಯ ಮೇಲೆ ನವಿಲುಗರಿ ಯನ್ನು ಸಿಕ್ಕಿಸಿಕೊ. ಆಮೇಲೆ ನಾನು ನಿನ್ನನ್ನು ನಮಿಸುತ್ತೇನೆ.''

ಪಾರಿಜಾತವೃಕ್ಷದ ಕೆಳಗೆ ಮನ್ಮಥನಂತೆ ನಿಂತಿರುವ ಕೃಷ್ಣನನ್ನು ಕವಿ ಹೀಗೆ ಚಿತ್ರಿಸಿದ್ದಾನೆ:

**ಮಂದಾರಮೂಲೇ ವದನಾಭಿರಾಮಂ**
**ಬಿಂಬಾಧರ ಪೂರಿತ-ವೇಣುನಾದಮ್**
**ಗೋ ಗೋಪ-ಗೋಪೀಜನಮಧ್ಯಸಂಸ್ಥಂ**
**ಗೋಪಂ ಭಜೇ ಗೋಕುಲ-ಪೂರ್ಣಚಂದ್ರಮ್॥**

''ಪಾರಿಜಾತ ವೃಕ್ಷದ ಬುಡದಲ್ಲಿ ಶ್ರೀಕೃಷ್ಣ ಮದನನಂತೆ ಸರ್ವಾಕರ್ಷಕನಾಗಿ ನಿಂತಿದ್ದಾನೆ. ಕೆಂಪಾದ ತುಟಿಗಳಿಂದ ವೇಣು ನಾದವನ್ನು ಮಾಡುತ್ತಿದ್ದಾನೆ. ಗೋವುಗಳು, ಗೋಪಾಲಕರು,



ಗೋಪಿಯರೂ ಅವನ ಸುತ್ತಲೂ ನಿಂತಿದ್ದಾರೆ. ಇಂತಹ ಪೂರ್ಣ ಚಂದ್ರನಂತೆ ಶೋಭಿಸುತ್ತಿರುವ, ಗೋಕುಲವಾಸಿಯಾದ ಗೋಪಾಲ ನನ್ನು ಆಶ್ರಯಿಸುತ್ತೇನೆ.''

ಭಗವಂತನ ಸಾಕ್ಷಾತ್ಕಾರಕ್ಕೆ ಬೇಕಾಗಿರುವುದು, ಆತನಲ್ಲಿ ಶರಣಾಗತಿ. ಮರ್ಕಟ ಶಿಶುನ್ಯಾಯದಂತೆ ಅವನನ್ನೇ ಗಟ್ಟಿಯಾಗಿ ನಂಬುವುದು ಅಥವಾ ಮಾರ್ಜಾಲ ಶಿಶುನ್ಯಾಯದಂತೆ, ಅವ ನಿಗೇ ಎಲ್ಲವನ್ನೂ ಒಪ್ಪಿಸಿದಾಗಲೇ, ಆತನ ಕೃಪಾಕಟಾಕ್ಷದ ಸಿದ್ಧಿ.

ಭಗವಂತನಲ್ಲಿ ತನ್ಮಯತೆಯನ್ನು ತಾಳುವ ಬಗೆಯನ್ನು ಕವಿ ಹೀಗೆ ವರ್ಣಿಸಿದ್ದಾನೆ: *(೨–೫೬)*

**ವಿಕ್ರೇತು ಕಾಮಾ ಕಿಲ ಗೋಪಕನ್ಯಾ**
**ಮುರಾರಿಪಾದಾರ್ಪಿತ ಚಿತ್ತವೃತ್ತಿಃ**
**ದಧ್ಯಾದಿಕಂ ಮೋಹವಶಾದವೋಚತ್**
**ಗೋವಿಂದ ದಾಮೋದರ ಮಾಧವೇತಿ॥**

''ಗೋಪೀಕನ್ಯೆ ಹಾಲು, ಮೊಸರನ್ನು ಹೊತ್ತು ಮಾರಲು ಹೊರಟಿದ್ದಳು. ಆದರೆ ಆಕೆಯ ಮನಸ್ಸು ಮುರಾರಿಯ ಪಾದ ದಲ್ಲಿ ನೆಟ್ಟಿತ್ತು. ಆದ್ದರಿಂದ ಆಕೆ ''ಹಾಲು-ಮೊಸರು ಬೇಕೇ'' ಎಂದು ಕೇಳುವುದನ್ನೇ ಮರೆತು, ಗೋವಿಂದ, ದಾಮೋದರ, ಮಾಧವ ಎಂದೇ ಕೂಗುತ್ತಿದ್ದಳು.''

ಗೋಪವಧುವಿನಂತೆ ಎಲ್ಲಾ ಕಾರ್ಯಗಳನ್ನು ಮಾಡು ತ್ತಿದ್ದರೂ, ಮನಸ್ಸು ಮಾತ್ರ ಭಗವಂತನಲ್ಲಿ ತನ್ಮಯವಾಗಿದ್ದರೆ ಅದು ಕರ್ಮಯೋಗವಾಗುತ್ತದೆ. ಪ್ರತಿಯೊಬ್ಬ ಸಾಧಕನೂ ಕರ್ಮಯೋಗಿಯಾಗಲು, ಕಂಸಾರಿಯಾದ ಶ್ರೀಕೃಷ್ಣನ ಪೂರ್ಣಾ ನುಗ್ರಹ ಬೇಕು. ಸಂಸಾರದಲ್ಲಿದ್ದೂ, ಕಂಸಾರಿಯನ್ನು ನೆನೆ ಯುವ ಸೌಭಾಗ್ಯವನ್ನು ಆತನು ಕರುಣಿಸಲೆಂದು ಪ್ರಾರ್ಥಿ ಸೋಣ.